ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2015–16 : ಜೂನ್ 5, 2015

# ಕಾರಾಗೃಹ ಮತ್ತು ನ್ಯಾಯಾಲಯಗಳೊಡನೆ ನೇರ ಸಂಪರ್ಕ, ವಿಚಾರಣಾಧೀನ ಖೈದಿಗಳ ವೀಡಿಯೋ ವಿಚಾರಣೆಗೆ ಅನುಮತಿ : ಕೆ. ಜೆ. ಜಾರ್ಜ್

**ಬೆಂಗಳೂರು, ಜೂನ್ 5 :**

ರಾಜ್ಯದ ಎಲ್ಲಾ 62 ಕಾರಾಗೃಹಗಳಿಗೆ ಎಲ್ಲಾ ನ್ಯಾಯಾಲಯಗಳೊಂದಿಗೆ ನೇರ ಸಂಪರ್ಕ ಕಲ್ಪಿಸಿ ವಿಚಾರಣಾಧೀನ ಖೈದಿಗಳ ವೀಡಿಯೋ ವಿಚಾರಣೆಗೆ ಅನುವುಮಾಡಿಕೊಡುವ ಪ್ರಸ್ತಾವಕ್ಕೆ ರಾಜ್ಯ ಗೃಹ ಇಲಾಖೆ ಅನುಮತಿ ನೀಡಿದೆ ಎಂದು ಗೃಹ ಸಚಿವ ಶ್ರೀ ಕೆ. ಜೆ. ಜಾರ್ಜ್ ಅವರು ಪ್ರಕಟಿಸಿದರು.

ನಗರದಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವನ್ನು ಬಹಿರಂಗಪಡಿಸಿದ ಶ್ರೀ ಜಾರ್ಜ್ ಅವರು ಕಾರಾಗೃಹದಲ್ಲಿನ ವಿಚಾರಣಾಧೀನ ಖೈದಿಗಳನ್ನು ವಿಡೀಯೋ ಕಾನ್‌ಫೆರೆನ್ಸ್ ಮೂಲಕ ಕರ್ನಾಟಕ ಉಚ್ಚ ನ್ಯಾಯಾಲಯವೂ ಸೇರಿದಂತೆ ಅಧೀನ ನ್ಯಾಯಾಲಯಗಳ ನ್ಯಾಯಧೀಶರು ವಿಚಾರಣೆಯನ್ನು ನಡೆಸಲು ಪೂರಕವಾಗಿ 30 ಕೋಟಿ ರೂ ವೆಚ್ಚದಲ್ಲಿ ಅತ್ಯಾಧುನಿಕ ಉಪಕರಣಗಳನ್ನು ಅಳವಡಿಸಿ ವೀಡಿಯೋ ವಿಚಾರಣೆಗೆ ಅನುವು ಮಾಡಿಕೊಡಲು ಗೃಹ ಇಲಾಖೆ ಸಮ್ಮತಿ ಸೂಚಿಸಿದೆ ಎಂದರು.

ಅಪರಾಧ ಪ್ರಕರಣಗಳ ಸಂಖ್ಯೆ ಹೆಚ್ಚಾದಂತೆ ಸಮಬಂಧಿಸಿದ ಎಲ್ಲಾ ಆರೋಪಿಗಳಿಗೂ ಸೂಕ್ತ ಭದ್ರತೆ ಒದಗಿಸಿ ನ್ಯಾಯಾಲಯಗಳಲ್ಲಿ ಸಕಾಲಕ್ಕೆ ಹಾಜರುಪಡಿಸುವಲ್ಲಿ ತೊಂದರೆ ಉಂಟಾಗುತ್ತಿದೆ. ಒಂದೆಡೆ ವಿಚಾರಣಾಧೀನ ಖೈದಿಗಳನ್ನು ನ್ಯಾಯಾಲಯಕ್ಕೆ ಕರೆತರಲು ಬೆಂಗಾವಲು ಸಿಬ್ಬಂದಿಯ ಕೊರತೆ ಮತ್ತೊಂದೆಡೆ ಎಲ್ಲಾ ನಗರ ಪಟ್ಟಣಗಳಲ್ಲಿನ ಸಂಚಾರ ದಟ್ಟಣೆಯೂ ನೂತನ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲು ಕಾರಣವಾಗಿದೆ. ಇದರಿಂದ ಆರೋಪಿಗಳು ತಪ್ಪಿಸಿಕೊಂಡು ಹೋಗುವುದಿರಲಿ, ಅಂತಹ ಪ್ರಯತ್ನ ನಡೆಸುವ ಸಾಧ್ಯತೆಗಳೂ ಇರುವುದಿಲ್ಲ ಎಂದು ಸಚಿವರು ಅಭಿಪ್ರಾಯಪಟ್ಟರು.

ನೂತನ ವ್ಯವಸ್ಥೆಯನ್ನು ಕಾರಾಗೃಹಗಳಲ್ಲಿ ಅಳವಡಿಸುವ ಮೂಲಕ ಮಾಹಿತಿ ತಂತ್ರಜ್ಞಾನದ ಲಾಭವನ್ನು ಪೊಲೀಸರು ಹಾಗೂ ವಿಚಾರಣಾಧೀನ ಖೈದಿಗಳು ಪಡೆಯಲಿದ್ದಾರೆ. ಇದರಿಂದ ವಿಚಾರಣೆಗೆ ಹೋಗಿ ಬರುವ ಸಮಯವನ್ನು ಹಾಗೂ ಪೊಲೀಸ್ ಸಿಬ್ಬಂದಿಯ ಶ್ರಮವು ಕಡಿಮೆಯಾಗುತ್ತದೆ ಎಂದು ಗೃಹ ಸಚಿವ ಶ್ರೀ ಜಾರ್ಜ್ ಅವರು ಹೇಳಿದರು.

ಪ್ರಧಾನ ಮಂತ್ರಿಯವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಎಲ್ಲಾ ರಾಜ್ಯಗಳ ಉಚ್ಛ ನ್ಯಾಯಾಲಯಗಳ ಮುಖ್ಯ ನ್ಯಾಯಾಧೀಶರ ಸಮ್ಮೇಳನದಲ್ಲಿ ವಿಚಾರಣಾಧೀನ ಖೈದಿಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ ತ್ವರಿತ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿರುವ ಹಿನ್ನೆಲೆಯಲ್ಲಿ ರಾಜ್ಯದ ಕಾರಗೃಹಗಳಲ್ಲಿ ಆಧುನಿಕ ತಂತ್ರಜ್ಞಾನ ಅಳವಡಿಸಿ ಅನುಷ್ಠಾನಗೊಳಿಸಲಿರುವ ಈ ನೂತನ ವ್ಯವಸ್ಥೆಯು ವಿಚಾರಣಾಧೀನ ಖೈದಿಗಳನ್ನು ನ್ಯಾಯಾಧೀಶರ ಸಮ್ಮುಖದಲ್ಲಿ ನೇರವಾಗಿ ಹಾಜರುಪಡಿಸುವಲ್ಲಿ ಉಂಟಾಗುತ್ತಿದ್ದ ಎಲ್ಲಾ ಬಗೆಯ ವಿಳಂಬವನ್ನು ತಪ್ಪಿಸಲಿದೆ ಎಂದು ಶ್ರೀ ಜಾರ್ಜ್ ಅವರು ತಿಳಿಸಿದರು.

ಅಲ್ಲದೆ, ಕುಖ್ಯಾತ ಅಪರಾಧಿಗಳು ಆರೋಗ್ಯ ನೆಪದಲ್ಲಿ ಪಲಾಯನ ಮಾಡುವ ಹಾಗೂ ಚಿಕಿತ್ಸೆಯ ನೆಪದಲ್ಲಿ ಆಸ್ಪತ್ರೆಗೆ ದಾಖಲಾಗುವ ಪ್ರಕರಣಗಳು ತಪ್ಪಿಸುವ ಹಿನ್ನೆಲೆಯಲ್ಲಿ ಇದೇ ಸೌಲಭ್ಯಗಳನ್ನು ಬಳಸಿ, ಕೆಲವೇ ಕಾರಾಗೃಹಗಳಲ್ಲಿ ಇರುವ ದೂರ ಸಂಪರ್ಕ ವೈದ್ಯಕೀಯ ವ್ಯವಸ್ಥೆ ( ಟೆಲಿ ಮೆಡಿಸನ್ ಪದ್ಧತಿ ) ಯನ್ನು ರಾಜ್ಯದ ಎಲ್ಲಾ ಕಾರಾಗೃಹಗಳಿಗೂ ವಿಸ್ತರಿಸಲಾಗುವುದು ಎಂದು ಸಚಿವರು ಹೇಳಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಪಶುಸಂಗೋಪನೆ ಮತ್ತು ಮುಜರಾಯಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಶ್ರೀ ಟಿ. ಬಿ. ಜಯಚಂದ್ರ ಅವರು ರಾಜ್ಯದಲ್ಲಿ ಎಲ್ಲಾ ಬಗೆಯ ಪ್ರಮುಖ ಅಪರಾಧಗಳ ಪ್ರಕರಣಗಳ ಸಂಖ್ಯೆ **12,65,000** ಇದೆ. ಇದರಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ **16,664**, ಭ್ರಷ್ಟಾಚಾರ ನಿಯಂತ್ರಣಾ ಕಾಯಿದೆಯಡಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ **1,965**, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದ ಜನರ ವಿರುದ್ಧ ನಡೆದಿರುವ ದೌರ್ಜನ್ಯ ಪ್ರಕರಣಗಳ ಸಂಖ್ಯೆ **3,609**, ಮಕ್ಕಳ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ **1,899**, ಹಿರಿಯ ನಾಗರೀಕರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ **20,010**, ವಿಕಲ ಚೇತನರ ಮೇಲಿನ ದೌರ್ಜನ್ಯ ಪ್ರಕರಣಗಳ ಸಂಖ್ಯೆ **149** ಹಾಗೂ ಬಾಲಾಪರಾಧಿಗಳ ಮೇಲಿನ ಪ್ರಕರಣಗಳ ಸಂಖ್ಯೆ **1,696**. ಈ ಎಲ್ಲಾ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕೆ ಕಾರಾಗೃಹದಿಂದಲೇ ನೇರವಾಗಿ ವಿಚಾರಣೆ ನಡೆಸಲು ಆಧುನಿಕ ತಂತ್ರಜ್ಞಾನವನ್ನು ಅಳವಡಿಸಲಾಗುತ್ತಿದೆ. ಈ ಸಂಬಂಧ ವಿವಿಧ ಇಲಾಖೆಗಳ ಮುಖ್ಯಸ್ಥರಿಗೆ ಈಗಾಗಲೇ ನಿರ್ದೇಶನ ನೀಡಲಾಗಿದೆ ಎಂದು ವಿವರಿಸಿದರು.

ಕಳೆದ ಐದು ವರ್ಷದಲ್ಲಿ ಹಿಂದೆ ಆಡಳಿತ ನಡೆಸಿದವರು ನೇಮಕಾತಿ ಮಾಡದೇ ಇರುವುದರಿಂದ ಕಾರಾಗೃಹ ಇಲಾಖೆ ಭಾರೀ ಪ್ರಮಾಣದ ಸಿಬ್ಬಂದಿ ಕೊರತೆಯನ್ನು ಅನುಭವಿಸುತ್ತಿದೆ ಇದನ್ನು ನೀಗಿಸಲು ನಮ್ಮ ಸರ್ಕಾರ ನೇಮಕಾತಿ ಮಾಡಿಕೊಳ್ಳಲು ಬದ್ಧವಾಗಿದೆ. ತರಬೇತಿಗೆ ಹೋದವರು ಈ ವರ್ಷಾಂತ್ಯಕ್ಕೆ ಸೇವೆಗೆ ಹಾಜರಾಗುವ ಸಾಧ್ಯತೆ ಇದೆ ಎಂದರು.

ಕರ್ನಾಟಕ ಕೈಗಾರಿಕಾ ಭದ್ರತಾ ಪಡೆ

ವಿಧಾನಸೌಧ ಮತ್ತು ವಿಕಾಸಸೌಧದಲ್ಲಿ ಪೊಲೀಸ್ ಭದ್ರತಾ ವ್ಯವಸ್ಥೆಯ ಸುಧಾರಣೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಕೇಂದ್ರ ಕೈಗಾರಿಕಾ ಮೀಸಲು ಪಡೆಯ ಮಾದರಿಯಲ್ಲಿಯೇ ಕರ್ನಾಟಕ ಕೈಗಾರಿಕಾ ಭದ್ರತಾ ಪಡೆಯನ್ನು ಈ ಎರಡೂ ಸ್ಥಳಗಳಲ್ಲಿ ನಿಯೋಜಿಸಲಾಗುವುದು. ಅಂಡರ್ ಸ್ಕ್ಯಾನರ್ ಯಂತ್ರಗಳನ್ನು ಬಳಸಿ ಈ ಎರಡೂ ಪ್ರದೇಶಗಳಿಗೆ ಆಗಮಿಸುವ ವಾಹನಗಳನ್ನು ಪೂರ್ಣ ಪ್ರಮಾಣದಲ್ಲಿ ತಪಾಸಣೆಗೆ ಒಳಪಡಲು ಉದ್ದೇಶಿಸಲಾಗಿದೆ ಎಂದು ಶ್ರೀ ಜಾರ್ಜ್ ಅವರು ತಿಳಿಸಿದರು.

ಕಳೆದ ಐದು ವರ್ಷಗಳಲ್ಲಿ ಭಾರತೀಯ ಜನತಾ ಪಕ್ಷದ ಸರ್ಕಾರ ಕೋಮು ಗಲಭೆ ಸಂಬಂಧಿಸಿದ 58 ಪ್ರಕರಣಗಳು ಸೇರಿದಂತೆ ಒಟ್ಟು 410 ಪ್ರಕರಣಗಳನ್ನು ಸಂಪುಟ ಪರಾಮರ್ಶೆ ಮಾಡಿ ನಿರ್ದೋಷಿ ಎಂದು ಪ್ರಕಟಿಸಿದೆ. ತಮ್ಮ ಕಾಂಗ್ರೆಸ್ ಸರ್ಕಾರ ಬಂದು ಕೇವಲ ಎರಡು ವರ್ಷಗಳಲ್ಲಿ 30 ಪ್ರಕರಣಗಳನ್ನು ಖುಲಾಸೆ ಮಾಡಿದೆ. ರೈತರ ಹಾಗೂ ಕನ್ನಡ ಪರ ಜನರ ರಕ್ಷಣೆಗೆ ಸರ್ಕಾರ ನಿಂತಿದೆ ಎಂದು ಸಚಿವರು ಸಮರ್ಥಿಸಿಕೊಂಡರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಯಾವುದೇ ಒಂದು ವರ್ಗವನ್ನು ಓಲೈಸುವ ಅಥವಾ ರಕ್ಷಿಸುವ ಪ್ರಶ್ನೆಯೇ ಇಲ್ಲ ಎಂದು ಸ್ಪಷ್ಟಪಡಿಸಿದ ಅವರು ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಸುಮಾರು ಒಂದು ಸಾವಿರ ಪೊಲೀಸ್ ಸಿಬ್ಬಂದಿ ಹಾಗೂ ಏಳು ಸಾವಿರ ಹೋಮ್‌ಗಾರ್ಡ್ಸ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ಸಚಿವರು ಅಂಕಿ ಅಂಶ ನೀಡಿದರು.

ಒಂದಂಕಿ ಲಾಟರಿ ಸಿ ಐ ಡಿ ತನಿಖೆ ಮುಂದರಿಕೆ ತಪ್ಪಲ್ಲ

ಒಂದಂಕಿ ಲಾಟರಿ ಪ್ರಕರಣವನ್ನು ರಾಜ್ಯ ಸರ್ಕಾರ ಸಿ ಬಿ ಐ ಗೆ ಒಪ್ಪಿಸಿದ್ದರೂ ಸಹ ಇದುವರೆಗೆ ವಿಚಾರಣೆ ಆರಂಭವಾಗದೇ ಇರುವ ಹಿನ್ನೆಲೆಯಲ್ಲಿ ಕಾನೂನು ಪ್ರಕಾರ ರಾಜ್ಯದ ಸಿ ಐ ಡಿ ಪೊಲೀಸರು ತನಿಖೆಯನ್ನು ಮುಂದುವರಿಸಿದ್ದಾರೆ. ರಾಜ್ಯ ಸರ್ಕಾರದ ಮನವಿಯನ್ನು ಸಿ ಬಿ ಐ ಪುರಸ್ಕರಿಸಿ ವಿಚಾರಣೆಗೆ ಮುಂದಾದಲ್ಲಿ ಸಂಗ್ರಹಿಸಿರುವ ಎಲ್ಲಾ ಮಾಹಿತಿಯನ್ನು ಸಿ ಐ ಡಿ ಅಧಿಕಾರಿಗಳು ಸಿ ಬಿ ಐ ಗೆ ಹಸ್ತಾಂತರಿಸಲಿದ್ದಾರೆ. ಈ ವಿಚಾರದಲ್ಲಿ ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡುವ ಪ್ರಶ್ನೆ ಉದ್ಭವವಾಗದು ಸಿ ಐ ಡಿ ತನಿಖೆ ಮುಂದರಿಕೆ ತಪ್ಪಲ್ಲ ಎಂದು ಗೃಹ ಸಚಿವ ಶ್ರೀ ಜಾರ್ಜ್ ಅವರು ಸ್ಪಷ್ಟನೆ ನೀಡಿದರು.

**************

ಡಿ ಪಿ ಎಂ